ಪ್ರ-72-130

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ. ಎ. ತಿಪ್ಪೇಸ್ವಾಮಿ ಇವರ ನಿಯಮ 72ರ ಸೂಚನೆ "ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ಹಂಸಧ್ವನಿ ಕಿವುಡ ಮಕ್ಕಳ ವಿಶೇಷ ಶಾಲೆಯನ್ನು ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ಸರ್ಕಾರಿ ವಸತಿ ಶಾಲೆಯನ್ನಾಗಿ ದಿನಾಂಕ:23.07.2016 ರಂದು ಮಾರ್ಪಡಿಸಿ, ಸರ್ಕಾರವು ಆದೇಶ ಹೊರಡಿಸಿದೆ. ಈ ಬಗ್ಗೆ ಇಲಾಖಾ ಸಚಿವರು ಭರವಸೆ ಸಂಖ್ಯೆ: ಮಮಇ/71/ಪಿ.ಹೆಚ್.ಪಿ/2017ರಲ್ಲಿ 2017-18ನೇ ಶೈಕ್ಷಣಿಕ ವರ್ಷದಿಂದ 100 ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯ ಕಲ್ಪಿಸುವುದಾಗಿ ಭರವಸೆ ನೀಡಿರುತ್ತಾರೆ. ನಿರ್ಮಿತಿ ಕೇಂದ್ರದಿಂದ ಕಟ್ಟಡವನ್ನು ವಸತಿ ಶಾಲೆಗಾಗಿ ಮಾರ್ಪಡಿಸಲಾಗಿರುತ್ತದೆ. ಆದರೆ ಈವರೆಗೂ ವಸತಿ ಶಾಲೆಯನ್ನು ಪ್ರಾರಂಭಿಸಿರುವುದಿಲ್ಲ. ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರಿ ಕಿವುಡ ಮಕ್ಕಳ ಶಾಲೆ ಇಲ್ಲದಿರುವ ಪ್ರಯುಕ್ತ ಕೂಡಲೇ ಬಡ ಕಿವುಡ ಮಕ್ಕಳಿಗೆ ವಸತಿ ಶಾಲೆ ಪ್ರಾರಂಭಿಸುವ ಬಗ್ಗೆ" ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರ ಉತ್ತರ:

ಬೆಂಗಳೂರಿನ ಇಂದಿರಾ ನಗರದಲ್ಲಿ ನಡೆಯುತ್ತಿದ್ದ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು 1982ರ ರಾಜ್ಯ ಅನುದಾನ ಸಂಹಿತೆಯಡಿ ನಿರ್ವಹಿಸುತ್ತಿದ್ದು, ಸದರಿ ಶಾಲೆಯಲ್ಲಿ ಕಿವುಡ ಮತ್ತು ಮೂಕ ಮಕ್ಕಳು ವ್ಯಾಸಂಗ ಮಾಡುತ್ತಿದ್ದು ಅವರಿಗೆ ಶಿಕ್ಷಣವನ್ನು ಮುಂದುವರೆಸಬೇಕೆಂಬ ಅಂಶವನ್ನು ಮನಗಂಡು ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ಸರ್ಕಾರವು ವಹಿಸಿಕೊಳ್ಳಲು ಇರುವ ಎಲ್ಲಾ ನಿಯಮಗಳನ್ನು ಪಾಲಿಸಿಯೇ ಸರ್ಕಾರದ ವಶಕ್ಕೆ ಪಡೆದು ಹಾಲಿ ಇರುವ ಸಿಬ್ಬಂದಿ ಸಮೇತ, ಚರ, ಸ್ಥಿರ ಆಸ್ತಿ ಒಳಗೊಂಡಂತೆ ಸರ್ಕಾರಿ ವಸತಿಯುತ ಶಾಲೆಯನ್ನಾಗಿ ನಿಯಮಾನುಸಾರ ಮಾರ್ಪಡಿಸಲು ಸರ್ಕಾರದ ಆದೇಶ ಸಂಖ್ಯೆ:ಮಮಇ 389 ಪಿಹೆಚ್‌ಪಿ 2014, ದಿನಾಂಕ:23.07.2016ರಲ್ಲಿ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಸದರಿ ಶಾಲೆಯನ್ನು ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸುವ ಸಂಬಂಧ ಅಗತ್ಯವಿರುವ ಶಾಲೆಗೆ ಸಂಬಂಧಿಸಿದ ಕಟ್ಟಡ ದುರಸ್ಥಿ ಕಾಮಗಾರಿಯನ್ನು ಬೆಂಗಳೂರಿನ ನಿರ್ಮಿತಿ ಕೇಂದ್ರದಿಂದ ಕೈಗೊಳ್ಳಲು 2017-18ನೇ ಸಾಲಿನಲ್ಲಿ ರೂ.44.39ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ದುರಸ್ಥಿ ಕಾಮಗಾರಿಯನ್ನು ನಿರ್ಮಿತಿ ಕೇಂದ್ರವು 2019ರ ಏಪ್ರಿಲ್ ಮಾಹೆಯಲ್ಲಿ ಪೂರ್ಣಗೊಳಿಸಿರುತ್ತದೆ.

ದಿನಾಂಕ:23.07.2016ರ ಸರ್ಕಾರದ ಆದೇಶದಲ್ಲಿ ಸೂಚಿಸಿರುವಂತೆ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯ ಆಡಳಿತವನ್ನು ಇಲಾಖೆಯೇ ವಹಿಸಿಕೊಂಡಿದ್ದು, ಸದರಿ ಶಾಲೆಯನ್ನು 100 ಮಕ್ಕಳಿಗಾಗಿ ಸರ್ಕಾರಿ ವಸತಿಯುತ ಶಾಲೆಯನ್ನಾಗಿ ಪರಿವರ್ತಿಸಲು 01 ಅಧೀಕ್ಷಕರು, 04 ಪ್ರೌಢ ಶಾಲಾ ಶಿಕ್ಷಕರು, 06 ಪ್ರಾಥಮಿಕ ಶಾಲಾ ಶಿಕ್ಷಕರು, 02 ವೃತ್ತಿ ಶಿಕ್ಷಕರು, 01 ದೈಹಿಕ ಶಿಕ್ಷಕರು, 01 ಪ್ರಥಮ ದರ್ಜೆ ಸಹಾಯಕರು, 01 ದ್ವಿತೀಯ ದರ್ಜೆ ಸಹಾಯಕರು/ ಕಂಪ್ಯೂಟರ್ ಅಪರೇಟರ್, 01 ವಾಹನ ಚಾಲಕರು, 01 ಗೃಹ ಪಾಲಕರು, 03 ರಕ್ಷಕರು, 02 ಅಡುಗೆಯವರು, 03 ಆಯಾ, 01 ಸ್ವಚ್ಚತಾಗಾರರು, 01 ಕಛೇರಿ ಸೇವಕರ ಹುದ್ದೆಗಳ ಅವಶ್ಯಕತೆಯಿರುತ್ತದೆ. ಈ ಸಂಬಂಧ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

ಬೆಂಗಳೂರು ಉತ್ತರ ತಾಲ್ಲೂಕಿನ ತಾವರೆಕೆರೆಯಲ್ಲಿರುವ ಶತಶೃಂಗ ಕಿವುಡ ಮಕ್ಕಳ ಶಾಲೆ, ಮಹಾಲಕ್ಷ್ಮೀ ಲೇಔಟ್‌ನಲ್ಲಿರುವ ಶಾಸ್ತ್ರಿ ಕಿವುಡ ಮಕ್ಕಳ ಶಾಲೆ, ಜೀವನಭಿಮಾನಗರದಲ್ಲಿರುವ ಕರ್ನಾಟಕ ವೆಲ್ಫೇರ್ ಅಸೋಸಿಯೇಷನ್‌ವತಿಯಿಂದ ನಡೆಸುತ್ತಿರುವ ನ್ಯಾಷನಲ್ ಕಿವುಡ ಮಕ್ಕಳ ಶಾಲೆಗಳು ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಅಂಗವಿಕಲ ಮಕ್ಕಳ ಶಿಶುಕೇಂದ್ರಿಕೃತ ಯೋಜನೆಯಡಿ ಅನುದಾನ ಪಡೆದು ಬೆಂಗಳೂರು ನಗರ ಜಿಲ್ಲೆಯಲ್ಲಿ ಕಿವುಡ ಮಕ್ಕಳಿಗೆ ಶಿಕ್ಷಣ ಒದಗಿಸಲು ಕಾರ್ಯನಿರ್ವಹಿಸುತ್ತಿದ್ದು, ಈ ಶಾಲೆಗಳಲ್ಲಿ ಕಿವುಡ ಮಕ್ಕಳಿಗೆ ಉಚಿತವಾಗಿ ಶಿಕ್ಷಣ ಮತ್ತು ವಸತಿ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.

**ಸಂಖ್ಯೆ: ಮಮಇ 87 ಪಿಹೆಚ್‌ಪಿ 2020**

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ,
ಹಿರಿಯ ನಾಗರಿಕರ ಸಬಲೀಕರಣ ಇಲಾಖಾ
ಸಚಿವರು